

## ಕದಂಬ ಹೂ ಗೊತ್ತೇ?

ಹಾಸನದಲ್ಲಿ ಹೊಸದಾಗಿ ನಿರ್ಮಾಣಗೊಂಡ ಎಸ್.ಎಂ. ಕೃಷ್ಣ ಲೇಔಟ್‌ಗೆ ಈಚೆಗೆ ವಾಯುವಿವಾಹಕ್ಕೆಂದು ಹೋಗಿದ್ದೆ. ಲೇಔಟ್ ತುಂಬ ನಾನಾ ರೀತಿಯ ಗಿಡಗಳನ್ನು ನೆಟ್ಟು ಪೋಷಿಸಲಾಗಿದೆ. ಹಲವು ಮರಗಳೂ ಇವೆ. ಲೇಔಟ್‌ನಲ್ಲಿ ಸುತ್ತಾಡುತ್ತಿರುವಾಗ ಈರುಳ್ಳಿಯ ಹೂವಿನಂತೆ ಇರುವ ಗುಂಡನೆಯ ಹೂವೊಂದು ಕಣ್ಣಿಗೆ ಬಿತ್ತು. ನೋಡಲು ಬಹಳ ಆಕರ್ಷಕವಾಗಿತ್ತು. ಹೂವಿನ ಮರದ ಹೆಸರಿಗಾಗಿ ಅಲ್ಲಿಲ್ಲಿ ಹುಡುಕಾಡಿದೆ. ಮಾಹಿತಿ ಸಿಗಲಿಲ್ಲ. ಕೊನೆಗೆ ಅಂತರ್ಜಾಲದ ಮೊರೆ ಹೋದೆ. ಆಗ ಅರಿವಾಯಿತು ಆ ಹೂವು ಕದಂಬ ಮರದ್ದೆಂದು.

ಹಾಗೇಯೇ ಕದಂಬ ಮರದ ಹಿನ್ನೆಲೆ ಕೆದಕಿದಾಗ ಮಯೂರ ವರ್ಮನ ವಂಶಸ್ಥರು ಈ ಮರವನ್ನು ಪೂಜಿಸುತ್ತಿದ್ದರಂತೆ. ಕ್ರಮೇಣ ಅವರು ಕದಂಬರೆಂದು ಪ್ರಸಿದ್ಧಿಯಾದರು ಎನ್ನಲಾಗಿದೆ. ಇದಕ್ಕೆ ಕದಂಬರ ತಾಳಗುಂದದ ಕನ್ನಡ ಶಿಲಾಶಾಸನವೂ ಸಾಕ್ಷಿ. ಒಂದೆರಡು ವಾರದ ನಂತರ ಕಿಡಿಗೇಡಿಗಳು ಕದಂಬ ವೃಕ್ಷದ ಬುಡದಲ್ಲಿ ತೊಗಟೆಯನ್ನು ಕಿತ್ತು ಮರಕ್ಕೆ ಹಾನಿ ಮಾಡಿದ್ದಾರೆ. ಮರವೊಂದಕ್ಕೆ ಹೀಗೆ ಮಾಡಿದರೆ ಅದು ಸಾಯುತ್ತದೆ ಎಂದು ಸ್ಥಳೀಯ ಪತ್ರಿಕೆಯೊಂದರಲ್ಲಿ ವರದಿಯಾಗಿತ್ತು. ಮರ ಗಿಡಗಳನ್ನು ನಾಶಮಾಡುವ ಬುದ್ಧಿಯನ್ನು ಬಿಟ್ಟು ಅವುಗಳನ್ನು ರಕ್ಷಿಸುವ ಗುಣವನ್ನು ಮನುಷ್ಯರು ಬೆಳೆಸಿಕೊಳ್ಳಬೇಕು.

**–ಕೆ.ಎನ್. ಪ್ರಭಾಕರ ಗುಪ್ತ, ಹಾಸನ**



## ಓಲ್ಡ್ 'ಲ್ಯಾಂಪ್'

ಇಡೀ ಜಗದಲ್ಲೆಲ್ಲ ಈಗ ಜಗಮಗಿಸುವ ವಿದ್ಯುದ್ದೀಪಗಳದ್ದೇ ಕಾರುಬಾರು. ವಿದ್ಯುತ್ ದೀಪಗಳೇ ಇಂದು ಎಲ್ಲರ ಮನೆ ಬೆಳಗುತ್ತಿವೆ. ಆದರೆ ಹಿಂದೆ. ಪರಿಸ್ಥಿತಿ ಈಗಿರಲಿಲ್ಲ. ಹಿಂದಿನ ಕಾಲದಲ್ಲಿ ಮನೆ ಬೆಳಗುತ್ತಿದ್ದ 'ಲ್ಯಾಂಪ್'ಗಳು ಇಂದು ನೋಡಲು ಕಾಣುವುದು ಅಪರೂಪ.



ಈ ಚಿತ್ರದಲ್ಲಿ ಕಾಣುತ್ತಿರುವ ಲ್ಯಾಂಪ್ ಸುಮಾರು 30 ವರ್ಷಗಳ ಹಿಂದಿನದ್ದು. ಸೀಮೆಎಣ್ಣೆ ಮೂಲಕ ಉರಿಯುವ ಈ ಲ್ಯಾಂಪ್‌ನ ಬೆಲೆ ಆಗ ₹20. ಇಂತಹ ಲ್ಯಾಂಪ್‌ಗಳಲ್ಲಿನ ಗಾಜಿನ ಕವಚ ಹೆಚ್ಚಿನ ದಿನ ಬಾಳಿಕೆ ಬರುತ್ತಿರಲಿಲ್ಲ. ಲ್ಯಾಂಪ್‌ಗೆ ಪ್ರತ್ಯೇಕವಾಗಿ ಗಾಜಿನ ಕವಚ ಖರೀದಿಸಬೇಕಿತ್ತು. ಆಗ ಅದರ ಬೆಲೆ ₹7. ಅರ್ಧ ಲೀಟರ್‌ನಿಂದ ಒಂದು ಲೀಟರ್ ಸೀಮೆ ಎಣ್ಣೆಯನ್ನು ಹಾಕಬಲ್ಲ ಲ್ಯಾಂಪ್‌ಗಳು ದೊರೆಯುತ್ತಿದ್ದವು. ಮನೆಯ ಒಂದು ಭಾಗದಲ್ಲಿ ಇದನ್ನ ನೇತು ಹಾಕಿದರೆ ಕತ್ತಲು ಆವರಿಸಿದ್ದ ಮನೆಯಲ್ಲಿ ಬೆಳಕು ತುಂಬುತ್ತಿತ್ತು. ಆಗೆಲ್ಲ ಸಹಜವಾಗಿ ಇಂತಹ ಲ್ಯಾಂಪ್‌ಗಳೂ ಇರುತ್ತಿದ್ದದ್ದು ಶ್ರೀಮಂತರ ಮನೆಯಲ್ಲೇ.

**–ಚಂದ್ರಹಾಸ, ಚಾರ್ಮಾಡಿ**


## ನೀವೂ ಬರೆಯಿರಿ

'ಸುಧಾ' ವಾರ ಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly